ಇ) ನಿವೇಶನ ಹಂಚಿಕೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಬಾಕಿ ಇರುವ ಅರ್ಜಿಗಳೆಷ್ಟು?

ಈ) ಬಾಕಿ ಉಳಿದಿರುವ ಅರ್ಜಿದಾರರಿಗೆ ನಿವೇಶನವನ್ನು ಹಂಚಲು-ಮುಗಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಉ) ವಿವಿಧ ನ್ಯಾಯಾಲಯದಿಂದ ಆಜ್ಞೆಯನ್ನು ಪಡೆದಿರುವ ಹಂಚಿಕೆದಾರರಿಗೆ ಬದಲಿ ನಿವೇಶನವನ್ನು ಹಂಚಲು ಕ್ರಮ ಕೈಗೊಂಡಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) 86,988

ಆ) ಇಲ್ಲ.

ಇ) 86,988

ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಿತಿಯಲ್ಲಿರುವ ಬಡಾವಣೆಗಳಲ್ಲಿ ಖಾಲಿ ನಿವೇಶನಗಳನ್ನು ಗುರುತಿಸುವ ಕಾರ್ಯ ನಡೆದಿದ್ದು, ಕೆಲವು ಪ್ರಕರಣಗಳಲ್ಲಿ (ಭೂ ಸ್ವಾಧೀನ) ನ್ಯಾಯಾಲಯದಲ್ಲಿ ಬಾಕಿ ಉಳಿದಿರುತ್ತದೆ. ಭೂ ಸ್ವಾಧೀನ ಪಡಿಸಿಕೊಂಡ ಕೂಡಲೇ ನಿವೇಶನ ಹಂಚಿಕೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಉ) ಇಂಥ ಪ್ರಕರಣಗಳನ್ನು ಗಮನಿಸಿದ್ದು ಮುಂದೆಯೂ ಸಹ ಆದ್ಯತೆಯ ಮೇಲೆ ಗಮನ ಕೊಡಲಾಗುವುದು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಕ್ರಮ

341- ಶ್ರೀ ಬಾಬುರಾವ್ ಚವ್ಹಾಣ್ (ಶಹಾಬಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಾಸಕರು ಕಛೇರಿಗಳಿಗೆ ಹೋದರೆ ಅಧಿಕಾರಿಗಳು ಎದ್ದು ನಿಂತು ಮರ್ಯಾದೆಯಿಂದ ವರ್ತಿಸಬೇಕೋ ಅಥವಾ ಕುರ್ಚಿಯ ಮೇಲೆ ಕೂತು ಅಸಭ್ಯತೆಯಿಂದ ವರ್ತಿಸಬೇಕೋ ತಿಳಿಸಿರಿ?

ಆ) ಅಸಭ್ಯದಿಂದ ವರ್ತಿಸಿದ ಅಧಿಕಾರಿಗಳ ಸಂಖ್ಯೆ ಎಷ್ಟು?

ಇ) ಅಂಥ ಅಧಿಕಾರಿಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಶಾಸಕರು ಸರ್ಕಾರಿ ಕಛೇರಿಗಳಿಗೆ ಹೋದಾಗ ಅಧಿಕಾರಿಗಳು ಎದ್ದು ನಿಂತು ಮರ್ಯಾದೆಯಿಂದ ವರ್ತಿಸಬೇಕೆಂದೂ ಸೂಚನೆಗಳನ್ನು ಹೊರಡಿಸಲಾಗಿದೆ.

ಆ) ಯಾವ ಅಧಿಕಾರಿ ಮೇಲೂ ದೂರು ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

ಶಹಾಬಾದ್ ಪುರಸಭೆಯಲ್ಲಿ 4 ತಿಂಗಳಿಂದ ನೌಕರರಿಗೆ ಸಂಬಳ ಕೊಡದಿರಲು ಕಾರಣ

343 - ಶ್ರೀ ಬಾಬುರಾವ್ ಚವ್ಹಾಣ್ (ಶಹಾಬಾದ್) : ಮಾನ್ಯ ವಸತಿ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಹಾಬಾದ್ ಪುರಸಭೆಯವರಿಗೆ ಸುಮಾರು 4 ತಿಂಗಳಿಂದ ಸಂಬಳ ಕೊಡದಿರಲು ಕಾರಣವೇನು?

ಆ) ರಾಜ್ಯದಲ್ಲಿರುವ ಪುರಸಭೆ ಕಾನೂನು ಮಾರ್ಪಾಡು ಮಾಡಲಾಗುವುದೆ?